**ಜಪಾನ್ ಮತ್ತು ಚೀನಾಕ್ಕೆ ಪ್ರಧಾನಮಂತ್ರಿಗಳ ಭೇಟಿ (ಆಗಸ್ಟ್ 29 - ಸೆಪ್ಟೆಂಬರ್ 01, 2025)**

ಆಗಸ್ಟ 22, 2025

ಜಪಾನ್ ಪ್ರಧಾನಮಂತ್ರಿ, ಗೌರವಾನ್ವಿತ ಶಿಗೆರು ಇಶಿಬಾ ಅವರ ಆಹ್ವಾನದ ಮೇರೆಗೆ, 15 ನೇ ಭಾರತ-ಜಪಾನ್ ವಾರ್ಷಿಕ ಶೃಂಗಸಭೆಯಲ್ಲಿ ಭಾಗವಹಿಸಲು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಅವರು 2025, ಆಗಸ್ಟ 29-30 ರಂದು ಜಪಾನ್‌ಗೆ ಭೇಟಿ ನೀಡಲಿದ್ದಾರೆ. ಇದು ಜಪಾನ್‌ಗೆ ಪ್ರಧಾನಿ ಮೋದಿಯವರ ಎಂಟನೇ ಭೇಟಿ ಮತ್ತು ಪ್ರಧಾನಿ ಇಶಿಬಾ ಅವರೊಂದಿಗೆ ಮೊದಲ ಶೃಂಗಸಭೆಯಾಗಲಿದೆ.

2. ಭೇಟಿಯ ಸಮಯದಲ್ಲಿ, ಉಭಯ ಪ್ರಧಾನಮಂತ್ರಿಗಳು ಭಾರತ ಮತ್ತು ಜಪಾನ್ ನಡುವಿನ ವಿಶೇಷ ಕಾರ್ಯತಂತ್ರ ಮತ್ತು ಜಾಗತಿಕ ಪಾಲುದಾರಿಕೆಯನ್ನು ಪರಿಶೀಲಿಸಲಿದ್ದಾರೆ, ಇದರಲ್ಲಿ ರಕ್ಷಣೆ ಮತ್ತು ಭದ್ರತೆ, ವ್ಯಾಪಾರ ಮತ್ತು ಆರ್ಥಿಕತೆ, ತಂತ್ರಜ್ಞಾನ ಮತ್ತು ನಾವೀನ್ಯತೆ ಮತ್ತು ಜನರಿಂದ ಜನರ ನಡುವಿನ ವಿನಿಮಯ ಸೇರಿವೆ. ಜೊತೆಗೆ ಪ್ರಾದೇಶಿಕ ಮತ್ತು ಜಾಗತಿಕ ಪ್ರಾಮುಖ್ಯತೆಯ ವಿಷಯಗಳ ಬಗ್ಗೆಯೂ ಚರ್ಚಿಸಲಿದ್ದಾರೆ. ಭೇಟಿಯು ಎರಡು ದೇಶಗಳ ನಡುವಿನ ದೀರ್ಘಾವಧಿಯ ಸ್ನೇಹದ ವಿಶೇಷ ಬಂಧವನ್ನು ಪುನರುಚ್ಚರಿಸುತ್ತದೆ.

3. ತಮ್ಮ ಭೇಟಿಯ ಎರಡನೇ ಹಂತದಲ್ಲಿ ಪ್ರಧಾನಮಂತ್ರಿಯವರು, ಚೀನಾ ಅಧ್ಯಕ್ಷ ಗೌರವಾನ್ವಿತ ಕ್ಸಿ ಜಿನ್‌ಪಿಂಗ್ ಅವರ ಆಹ್ವಾನದ ಮೇರೆಗೆ, ಟಿಯಾಂಜಿನ್‌ನಲ್ಲಿ ನಡೆಯಲಿರುವ ಶಾಂಘೈ ಸಹಕಾರ ಸಂಸ್ಥೆ (SCO) ಶೃಂಗಸಭೆಯಲ್ಲಿ ಹಾಜರಾಗಲು 2025 ರ ಆಗಸ್ಟ 31 ರಿಂದ ಸೆಪ್ಟೆಂಬರ್ 1 ವರೆಗೆ ಚೀನಾ ಪ್ರವಾಸದಲ್ಲಿರಲಿದ್ದಾರೆ. ಶೃಂಗಸಭೆಯ ನೇಪಥ್ಯದಲ್ಲಿ, ಶೃಂಗಸಭೆಗೆ ಹಾಜರಾಗುವ ಹಲವಾರು ನಾಯಕರೊಂದಿಗೆ ಪ್ರಧಾನಮಂತ್ರಿಯವರು ದ್ವಿಪಕ್ಷೀಯ ಸಭೆಗಳನ್ನು ನಡೆಸುವ ನಿರೀಕ್ಷೆಯಿದೆ.

4. ಭಾರತವು 2017 ರಿಂದ SCO ಸದಸ್ಯ ರಾಷ್ಟ್ರವಾಗಿದೆ. ಇದು 2022-23 ರಲ್ಲಿ SCO ಮುಖ್ಯಸ್ಥರ ಮಂಡಳಿಯ ಅಧ್ಯಕ್ಷತೆಯನ್ನು ವಹಿಸಿತ್ತು.

ನವ ದೆಹಲಿ

ಆಗಸ್ಟ 22, 2025